ಓ ಎಸ್ ನಂ. 148/2020
ಡಿ ಡಬ್ಲ್ಯು 2
ದಿನಾಂಕ 11/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರಃ ಶ್ರೀ ಕೆ ಜಿ ಪಿ ವಕೀಲರಿಂದಃ

ನನಗೆ ಪ್ರತಿವಾದಿ ಸುಮಾರು 20 ವರ್ಷಗಳಿಂದ ಪರಿಚಯ ಇದ್ದಾರೆ. ನಾನು ಮತ್ತು ಪ್ರತಿವಾದಿ ಸಂಬಂಧಿಕರಲ್ಲ, ಆದರೆ ಇಬ್ಬರು ಸಹ ಡಿಪ್ಲೋಮಾ ವ್ಯಾಸಂಗವನ್ನು ಒಟ್ಟಿಗೆ ಮಾಡಿರುತ್ತೇವೆ. ನಾನು ಕಡೂರಿನ ಲಕ್ಷ್ಮೀಶ ನಗರದ ನಿವಾಸಿಯಾಗಿದ್ದು, ಪ್ರತಿವಾದಿ ಕಂಸಾಗರದ ನಿವಾಸಿಯಾಗಿರುತ್ತಾರೆ. ನಾನು ಕಡೂರಿನಲ್ಲಿ ಸ್ಕಿಲ್ ಡೆವಲಪ್ಮೆಂಟ್ ಟ್ರೈನಿಂಗ್ ಸೆಂಟರ್ ನಡೆಸುತ್ತೇನೆ. ನನಗೆ ಅದೇ ವ್ಯವಹಾರವಾಗಿರುತ್ತದೆ. ಪ್ರತಿವಾದಿ ಕುಟುಂಬಕ್ಕೆ ಸರಿಸುಮಾರು ಎಷ್ಟು ಜಮೀನು ಇದೆ ಎಂದರೆ ಸಾಕ್ಷಿ ನನಗೆ ಸಂಪೂರ್ಣವಾಗಿ ಗೊತ್ತಿಲ್ಲ, ಆದರೆ 4-5 ಎಕರೆ ಇರಬಹುದು ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತನ್ನು ಪ್ರತಿವಾದಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಅದು ಅವರ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲಾತಿಗಳನ್ನು ನಾನು ನೋಡಿರುತ್ತೇನಾ ಎಂದರೆ ಸಾಕ್ಷಿ ಹೌದು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಯರ ಕುಟುಂಬದಲ್ಲಿ ಆದಂತಹ ವಿಭಾಗ ಪತ್ರವನ್ನು ನೋಡಿರುತ್ತೇನೆ.

ನಿಪಿ-1 ರ ಕರಾರು ಪತ್ರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿ. ಅದರಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿರುತ್ತವೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಪ್ರತಿವಾದಿ ವಾದಿಗೆ ಹಣವನ್ನು ವಾಪಸು ಕೊಟ್ಟ ನಂತರ ಒಪ್ಪಂದ ಕರಾರು ಪತ್ರವನ್ನು ರದ್ದು ಪಡಿಸಬೇಕೆಂದು ಹೇಳಿರುವ ವಿಚಾರಕ್ಕೆ ಸಂಬಂದಪಟ್ಟಂತೆ ವಾದಿ ಎದುರು ಕರಾರುಪತ್ರವನ್ನೇನಾದರೂ ಬರೆದುಕೊಟ್ಟಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆ ರೀತಿ ಹಣವನ್ನು ಪ್ರತಿವಾದಿ ವಾದಿಗೆ ಕೊಟ್ಟ ನಂತರದಲ್ಲಿ ಎದುರುಕರಾರು ಪತ್ರವನ್ನು ಬರೆದುಕೊಡುಬೇಕು ಎಂಬುದಾಗಿ ಒಪ್ಪಂದ ಪತ್ರ ಮಾಡಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ಆದರೆ ವಾದಿ ಹಣ ಪಡೆದ ನಂತರ ಒಪ್ಪಂದ ಪತ್ರವನ್ನು ಹಿಂತಿರುಗಿಸುವುದಾಗಿ ಹೇಳಿದ್ದರು ಎಂದು ನುಡಿಯುತ್ತಾರೆ. ಕರೋನಾವಾದ ನಂತರದಲ್ಲಿ ಭೂಮಿಯ ಬೆಲೆ ಹೆಚ್ಚಾಗಿದೆ ಎಂದರೆ ಸರಿ.

ಒಪ್ಪಂದ ಕರಾರುಪತ್ರ ಮಾಡಿಕೊಳ್ಳುವ ಸಮಯದಲ್ಲಿ ದಾವಾ ಸ್ವತ್ತಿನ ಬೆಲೆ 6 ಲಕ್ಷ ರೂ ಮಾತ್ರ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೆಚ್ಚು ಇತ್ತು ಎಂದು ನುಡಿಯುತ್ತಾರೆ. ಬೆಲೆ ಹೆಚ್ಚು ಇತ್ತು ತೋರಿಸಲು ನಾನು ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನಾ ಎಂದರೆ ಸಾಕ್ಷಿ ಹೌದು ಅವುಗಳನ್ನು ನಾನು ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ದಾವಾ

ಸ್ವತ್ತು ಸಂಪೂರ್ಣವಾಗಿ ಅಡಿಕೆ ತೋಟವಾಗಿರುತ್ತದೆ ಎಂದು ನುಡಿಯುತ್ತಾರೆ. 2019 ರಲ್ಲಿ ಇದ್ದಂತಹ ಅಡಿಕೆಯ ಬೆಲೆ 2019 ರ ನಂತರದಲ್ಲಿ ಹೆಚ್ಚಾಗಿರುತ್ತದೆ ಎಂದರೆ ಸರಿ. ಆ ರೀತಿ ಅಡಿಕೆಯ ಬೆಲೆ ಹೆಚ್ಚಾಗಿರುವ ಕಾರಣ ಪ್ರತಿವಾದಿ ತನ್ನ ಸ್ವಇಚ್ಛೆಯಿಂದ ಕ್ರಯಕರಾರು ಪತ್ರವನ್ನು ಬರೆದುಕೊಟ್ಟಿದ್ದರೂ ಸಹ ನಾನು ಪ್ರತಿವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದಪಟ್ಟಂತೆ ಕರಾರುಪತ್ರದ ಬದಲಾಗಿ ಆಧಾರಪತ್ರ ಮಾಡಿಕೊಳ್ಳಲು ತೊಂದರೆ ಇತ್ತ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಿಗೆ ಪ್ರತಿವಾದಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿಕೊಂಡು 6 ಲಕ್ಷ ರೂಗಳಿಗೆ ಮಾತುಕತೆಯಾಗಿ ಅದರ ಬಾಬ್ತು 3.50 ಲಕ್ಷ ರೂಗಳನ್ನು ಪ್ರತಿವಾದಿ ಮುಂಗಡವಾಗಿ ಪಡೆದಿರುತ್ತಾರೆ ಎಂದರೆ ಸಾಕ್ಷಿ ಹಣ ಪಡೆದಿರುವುದು ನಿಜ ಆದರೆ ಮಾರಾಟದ ಬಾಬ್ತು ಅಲ್ಲ ಪ್ರತಿವಾದಿಯ ಮಗನ ವಿದ್ಯಾಭ್ಯಾಸಕ್ಕಾಗಿ ಸಾಲವಾಗಿ ಪಡೆದ ಹಣ ಎಂದು ನುಡಿಯುತ್ತಾರೆ. ಪ್ರತಿವಾದಿಯ ಎಲ್ಲಾ ವ್ಯವಹಾರಗಳಿಗೂ ಸಹ ನಾನೇ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಮತ್ತು ಪ್ರತಿವಾದಿ ಆತ್ಮೀಯ ಗೆಳೆಯರು ಎಂದರೆ ಸರಿ. ಆದ್ದರಿಂದ ನಾನು ಪ್ರತಿವಾದಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ದಾಖಲೆಯನ್ನು ಪ್ರತಿವಾದಿ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶದಿಂದಲೇ

ಮಾಡಿದ್ದರೂ ಸಹ ಸದರಿ ದಾಖಲೆಯನ್ನು ಹಣದ ಭದ್ರತೆಗಾಗಿ ಬರೆದುಕೊಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವಾ ಆಸ್ತಿಯ ಬೆಲೆ ಹೆಚ್ಚು ಇರುವುದರಿಂದ ಅದನ್ನು ಉಳಿಸಿಕೊಳ್ಳುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.